ಶ್ರೀ ಪಿ. ಎಂ. ಬಂಗಿ ;—ಈ ಬಗ್ಗೆ ಕೋಆಪರೇಟಿವ್ ಆಕ್ಟ್‌ನ ೧೭ (೫)ನಲ್ಲಿ ಸ್ಪಷ್ಟವಾಗಿ ಹೇಳಿದೆ ಆದಾಗ್ಯೂ ಜಮಖಂಡಿ ಮತ್ತು ಬೆಳಿದ ಬ್ಯಾಂಕ ಗಳಲ್ಲಿ ಯಾವುದೇ ರೀತಿಯಿಂದಲೂ ಜಾಹೀರಾತು ಕೊಡದೆ ತಮಗೆ ಬೇಕಾದ ಅಪ್ಪರನ್ನು ನಂಟಾಪ್ಪರನ್ನು ನೇಮಕ ಮಾಡುತಿದ್ದಾರೆ ಈ ಬ್ಯಾಂಕ್‌ಗಳಲ್ಲಿ ಸರ್ಕಾರದ ಷೇರ್ ಹಣ ಇರಲಿ, ಇಲ್ಲದಿರಲಿ ಅವರು ಈ ಕಾನೂನನ್ನು ಜಾರಿಗೆ ತರಬೇಕಾಗುತ್ತದೆ. ಆ ರೀತಿ ತರದಿದ್ದರೆ ಅವರ ವಿರುದ್ಧ ಏನು ಕ್ರಮ ಕೈಕೊಳ್ಳುತ್ತೀರಾ?

ಶ್ರೀ ಸಿ. ಎನ್. ಪಾಟೀಲ ;—ಜಮಖಂಡಿ ಬ್ಯಾಂಕ್ ಮತ್ತು ಬಿಜಾಪುರದ ಅರ್ಬನ್ ಡೆವಲಪ್ಮೆಂಟ್ ಬ್ಯಾಂಕ್‌ನಲ್ಲಿ ಸರ್ಕಾರದ ಪಾಲಿನ ಹಣವಿಲ್ಲ. ಆದರೂ ಅವರ ಮೇಲೆ ಈ ಬಗ್ಗೆ ಏನಾದರೂ ಎನ ಫೂರ್ಸ್‌ಮೆಂಟ್ ಮಾಡಬೇಕಾಗಿದ್ದರೆ ಕಾನೂನಿಗೆ ತಿದ್ದುಪಡಿ ತರಬೇಕಾಗುತ್ತದೆ.

ಶ್ರೀ ಪಿ. ಎಂ. ಬಂಗಿ :—ನಾನು ಕೇವಲ ಹರಿಜನ ಮತ್ತು ಗಿರಿಜನರ ಬಗ್ಗೆ ಹೇಳುತ್ತಿಲ್ಲ ಜನರಲ್ ಆಗಿ ಸಹ ಅವರು ಪೋಸ್ಟ್‌ಗಳನ್ನು ಭರ್ತಿ ಮಾಡುವಾಗ ಜಾಹೀರಾತು ಕೊಡುತ್ತಿಲ್ಲ ಎಂಬುದು ನನ್ನ ಪ್ರಶ್ನೆ.

ಶ್ರೀ ಸಿ.ಎನ್. ಪಾಟೀಲ್ ;—ಆ ಬಗ್ಗೆ ಕ್ರಮ ಕೈಕೊಳ್ಳುತ್ತೇವೆ.

ಅಧ್ಯಕ್ಷರು :—ಮಾನ್ಯ ಬಸವಯ್ಯನವರ ಪರವಾಗಿ ನಾನು ಪ್ರಶ್ನೆ ನಂ. ೨೪೬ ಹಾಕುತ್ತೇನೆ.

NOMINATION OF LEGISLATORS TO PRIMARY LAND DEVELOPMENT BANKS AS EX-OFFICIO DIRECTORS

246. SRI N. BASAVAIAH(Chikkanayakanahalli) :—Will the Minister for Co-operation be pleased to state :

(*a*) whether it has come to the notice of the Government that there is no provision for the Legislators to be on the Board of Directors of the Primary Land Development Banks as Ex-Officio Directors.

(*b*) if so, whether is any proposal before the Government to make provision to nominate the Legislators on the Board of Directors of Primary Land Development Banks as Ex-Officio Directors?

SRI C.M. PATIL(Minister for Co-operation) :—

(*a*) Yes

(*b*) No.

ಶ್ರೀ ಕೋಣಂದೂರು ಲಿಂಗಪ್ಪ :—ಸ್ಥಳೀಯ ಶಾಸಕರನ್ನು ಪ್ರೈಮರಿಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ಸ್‌ನಲ್ಲಿ ಎಕ್ಸ್‌ಅಫಿಷಿಯೋ ಡೈರೆಕ್ಟರ್ಸ್ ಆಗಿ ನೇಮಕ ಮಾಡದಿದ್ದರೆ, ಈ ಬ್ಯಾಂಕ್‌ಗಳಲ್ಲಿರುವ ಡೈರೆಕ್ಟರ್ಸ್ ಮತ್ತು ಅಧ್ಯಕ್ಷರು ಹೇಗೆಂದು ತಮಗೆ ಇಷ್ಟ ಬಂದಂತೆ ಹಂಚುತ್ತಾರೆ ಮತ್ತು ತಮ್ಮ ಸ್ವಂತ ಹಣದಂತೆ ವಿನಿಯೋಗ ಮಾಡುತ್ತಾರೆ. ಇದನ್ನು ತಡೆಗಟ್ಟಲು ಸ್ಥಳೀಯ ಶಾಸಕರನ್ನು ಎಕ್ಸ್ ಅಫಿಷಿಯೋ ಡೈರಕ್ಟರ್ಸ್ ಆಗಿ ನೇಮಕ ಮಾಡುವುದು ಒಳ್ಳೆಯದು. ಆಗ ಅಲ್ಲಿ ಏನಾದರು ಅಕ್ರಮಗಳು ನಡೆದರೆ ಅವರನ್ನು ಮತ್ತು ನಿಮ್ಮನ್ನು ಒಟ್ಟಿಗೆ ರಿಪೇರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ.

†ಶ್ರೀ ಸಿ.ಎನ್. ಪಾಟೀಲ್ :—ಲೆಜಿಸ್ಲೇಟಿವ್ ಕನ್‌ವೆನ್ಷನ್ ಪ್ರಕಾರ ಸ್ಥಳೀಯ ಶಾಸಕರನ್ನು ಎಕ್ಸ್-ಅಫಿಷಿಯೋ ಡೈರಕ್ಟರ್ಸ್ ಆಗಿ ಈ ಬ್ಯಾಂಕ್‌ಗಳಲ್ಲಿ ನೇಮಕ ಮಾಡುವ ಪದ್ಧತಿ ಇಲ್ಲ ಮತ್ತು ಆ ವಿಚಾರ ರಾಜ್ಯ ಸರ್ಕಾರದ ಮುಂದೆ ಸಹ ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಈ ಬ್ಯಾಂಕಿನವರು ಹೆಚ್ಚು ಹೆಚ್ಚು ಯೋಜನೆಗಳನ್ನು ಕೈಗೊಳ್ಳುತ್ತಾರೆ. ಆ ರೀತಿ ಖರ್ಚು ಮಾಡುವ ಹಣ ಸರಿಯಾಗಿ ವಿನಿಯೋಗವಾಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳಲು ಸ್ಥಳೀಯ ಶಾಸಕರನ್ನು ಎಕ್ಸ್-ಆಫಿಷಿಯೋ ಡೈರೆಕ್ಟರ್ಸ್ ಆಗಿ ನೇಮಕ ಮಾಡುವುದು ಒಳ್ಳೆಯದು. ಇದರಿಂದ ಅವರೂ ಸಹ ಆದರಲ್ಲಿ ಸಕ್ರೀಯವಾಗಿ ಪಾಲುಗೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆ ಕಾರಣದಿಂದ ಈ ಬಗ್ಗೆ ಕಾನೂನಿಗೆ ಒಂದು ತಿದ್ದುಪಡಿ ತರುತ್ತೀರೂ ಮಾಡುತ್ತೀರಾ?

ಶ್ರೀ ಸಿ.ಎನ್. ಪಾಟೀಲ್ :—ಅದು ರಾಜ್ಯಸರ್ಕಾರದ ಮುಂದೆ ಬಂದಿಲ್ಲ ಈಗ ಮೊದಲನೇ ಸಲ ಆ ಒಂದು ಅಭಿಪ್ರಾಯ ಬಂದಿದೆ. ಆ ಬಗ್ಗೆ ಲೆಜಿಸ್ಲೇಟಿರ್ಸ್ ಪಾರ್ಟಿ ಒಂದು ನಿರ್ಣಯ ಕೈಕೊಂಡರೆ ವಿಚಾರ ಮಾಡೋಣ.

ಶ್ರೀ ಎಂ ಬಿ ರಾಮಸ್ವಾಮಿ :—ತಾಲ್ಲೂಕ್ ಮಂಡಲಿಗಳ ಕೆಲಸಕಾರ್ಯಗಳಲ್ಲಿ ಶಾಸಕರು ಪಾಲು ಗೊಳ್ಳುವ ರೀತಿಯಲ್ಲಿ ಇಲ್ಲಿಯೂ ಸಹ ಪಾಲುಗೊಳ್ಳುವಂತೆ ಅವಕಾಶ ಮಾಡಿಕೊಡಬೇಕು. ಏಕೆಂದರೆ ಇಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯುತ್ತಿರುತ್ತದೆ. ಆ ರೀತಿ ನಡೆಯುವ ವ್ಯವಹಾರವನ್ನು ನೋಡಿಕೊಳ್ಳಲು ಮತ್ತು ಚೆಕ್ ಮಾಡಲು ಶಾಸಕರು ಅಲ್ಲಿರುವುದು ಸೂಕ್ತವಲ್ಲವೇ? ಇದಕಾರಣ ಈ ಬಗ್ಗೆ ತಮ್ಮ ಕಾಲದಲ್ಲಿಯೇ ಒಂದು ಕಾನೂನನ್ನು ಮಾಡುತ್ತೀರಾ?

ಶ್ರೀ ಸಿ.ಎನ್. ಪಾಟೀಲ್ :—ರಾಜ್ಯಸರ್ಕಾರದ ಮೊದಲನೇ ಸಲ ಈ ಅಭಿಪ್ರಾಯ ಬಂದಿದೆ. ಮುಂಖ್ಯವಾಗಿ ಇಲ್ಲಿ ಶಾಸಕರಾದವರಿಗೆ ನೂಗಾರು ಕೋಟಿ ರೂಪಾಯಿಗಳ ವ್ಯವಹಾರವನ್ನು ನೋಡಿ ಕೊಳ್ಳಲು ಮತ್ತು ಸೂಪರ್‌ವಿಷನ್ ಮಾಡಲು ಅವಕಾಶವಿದೆಯೇ ಎಂಬ ಪ್ರಶ್ನೆ ಬರುತ್ತದೆ.

ಶ್ರೀ ಎಚ್.ಡಿ. ದೇವೇಗೌಡ ; ಸ್ಥಳೀಯ ಸಂಸ್ಥೆಗಳಾದ ಪಂಚಾಯಿತಿಗಳು ಸೊಸೈಟಿಗಳು, ಮತ್ತು ತಾಲ್ಲೂಕ್ ಬೋರ್ಡ್‌ಗಳಲ್ಲಿ ಸ್ಥಳೀಯ ಶಾಸಕರುಗಳು ರೆಪ್ರೆಜೆಂಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದೂ ತಾವು ಹೇಳಿದಿರಿ ಆದರೆ ಅದು ಸರಿಯಲ್ಲ. ಒಂದು ಸಲ ನಮ್ಮ ಭಾಗದಲ್ಲಿ ಸ್ಥಳೀಯ ಶಾಸಕ ರೊಬ್ಬರು ಮುನಿಸಿಪಾಲಿಟಿಯ ಚುನಾವಣೆಯಲ್ಲಿ ಭಾಗವಹಿಸಿ ಒಂದು ಓಟನ್ನು ಸಹ ತೆಗೆದುಕೊಳ್ಳಲಿಲ್ಲ, ಆದು ಬೇರೆ ಮಾತು. ಮುಂಖ್ಯವಾಗಿ ಸ್ಥಳೀಯ ಶಾಸಕರಾಗಿ ಆರಿಸಿ ಬಂದಮೇಲೆ ಅವರನ್ನು ತಾಲ್ಲೂಕ್ ಮಟ್ಟದಲ್ಲಿ ಅಧಿಪತಿಯನ್ನಾಗಿ ತಮ್ಮ ಕಾಲದಲ್ಲಿ ನೇಮಕ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಸಿ.ಎನ್. ಪಾಟೀಲ್ :—ಅಧಿಪತಿ ಎಂದರೆ ದಂಡಾಧಿಪತಿ ಎಂದು ಅರ್ಥವೇ?

ಅಧ್ಯಕ್ಷರು ;—ಪ್ರಶ್ನೋತ್ತರ ವೇಳೆ ಮುಗಿಯಿತು. ಮಾನ್ಯ ಆರೋಗ್ಯ ಮಂತ್ರಿಗಳು ಈಗ ಅಸ್ಸೆಂಬ್ಲಿಗೆ ಹೋಗಬೇಕಾಗಿರುವುದರಿಂದ ಮಾನ್ಯ ದೇವೇಗೌಡರ ಗಮನ ಸೆಳೆಯುವ ಸೂಚನೆಯನ್ನು ಮೊದಲು ತೆಗೆದುಕೊಳ್ಳುತ್ತೇನೆ.

CALLING ATTENTION TO MATTERS OF URGENT PUBLIC IMPORTANCE

(i) *re-grievances of Basic Health of Workers*

ಶ್ರೀ ಎಚ್.ಡಿ. ದೇವೇಗೌಡ(ಹೊಳೆನರಸಿಪುರ). —ಬೇಸಿಕ್ ಹೆಲ್ತ್ ವರ್ಕರ್ಸ್‌ಗೆ ಇರತಕ್ಕಂಥ ಕುಂದು ಕೊರತೆಗಳ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

SRI H. SIDDAVEERAPPA (Minister for Health).—The Scheme of Basic Health workers came into existence in 1964. When the Anti-malarial operations came to an end in some portions of the State, the personnel working in the Malaria Scheme were absorbed as Basic Health Workers,